ಸಮನ್ವಯ ಸಮಿತಿಗೆ ಆಯ್ಕೆಯಾಗಬೇಕಾದ ಸದಸ್ಯರ ಸಂಖ್ಯೆಗೆ ಸಮನಾಗಿ ನಾಮಪತ್ರಗಳು ಬಂದಿದ್ದು ಈ ಕೆಳಕಂಡ ಸದಸ್ಯರು ಆಯ್ಕೆಯಾಗಿದ್ದಾರೆಂದು ಈ ಮೂಲಕ ತಿಳಿಸುತ್ತಿದ್ದೇನೆ:

1. ಶ್ರೀಮತಿ ಜ್ಯೋತಿ ರೆಡ್ಡಿ.

2. ಶ್ರೀ ರುದ್ರಗೌಡ ಕುಮ್ಸಿಯಾಳ

ಪ್ರಕಟಣೆ (2)

ರಕ್ತದಾನ

ಅಧ್ಯಕ್ಷರು: ಇವತ್ತು ಬೆಳಗಿನಿಂದ ದೇಶದ ಸ್ವಾತಂತ್ರ್ಯ ಸುವರ್ಣೋತ್ಸವದ ಅಂಗವಾಗಿ ಶಾಸಕಾಂಗ ಕಛೇರಿಯ ಸಿಬ್ಬಂದಿ ಮತ್ತು ಶಾಸಕರು ಎಲ್ಲರೂ ಕೂಡ ರಕ್ತದಾನ ಮಾಡುತ್ತಿದ್ದಾರೆ. ನಾನು ಕೂಡ ಬೆಳಿಗ್ಗೆ ರಕ್ತದಾನ ಮಾಡಿ ಬಂದಿದ್ದೇನೆ. ಮೇಲ್ಮನೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್.ಕೆ.ಪಾಟೀಲರು ರಕ್ತ ಕೊಟ್ಟು ಬಂದಿದ್ದಾರೆ. ನನಗೆ ತಿಳಿದ ಹಾಗೆ 6-7 ಜನರು ಮಾತ್ರ ಹೋಗಿದ್ದಾರೆ. ಸದೃಢವಾಗಿ ಆರೋಗ್ಯವಾಗಿ ಇರತಕ್ಕವರು 50 ವರ್ಷಗೊಳಗಿರತಕ್ಕ ಎಲ್ಲಾ ಶಾಸಕರು ವಿಶೇಷವಾಗಿ ಮಂತ್ರಿಗಳು ದಯಮಾಡಿ ಈ ಪುಣ್ಯ ಕೆಲಸ ಮಾಡಿ, ರಕ್ತದಾನ ಮಾಡಿ ಬರಬೇಕೆಂದು ವಿನಂತಿಸುತ್ತಿದ್ದೇನೆ.

ಶ್ರೀ ಎನ್.ಯೋಗೀಶ್ ಭಟ್: ಸ್ವಾತಂತ್ರೋತ್ಸವ ಸಂದರ್ಭದಲ್ಲಿ ನಾನು ನಮ್ಮ ಕ್ಷೇತ್ರದಲ್ಲಿ ರಕ್ತದಾನ ಮಾಡಿದ್ದೇನೆ.

ಅಧ್ಯಕ್ಷರು: ನೀವು ಕೊಟ್ಟಿದ್ದೀರಿ, ನಿಮ್ಮ ಬಗ್ಗೆ ನನಗೆ ವಿಶ್ವಾಸ ಇದೆ. ಹೋದ ಸಾರಿಯೂ ನೀವು ಕೊಟ್ಟಿರಿ. ನಾನು ಇಲ್ಲಿ ಹೆಸರು ಹೇಳುವುದುಬೇಡ; ಯಾರು ಯಾರು ರಕ್ತ ಕೊಡಬಲ್ಲರು ಎಂಬುದು ಗೊತ್ತು. ಆಮೇಲೆ ಪಟ್ಟಿ ತರಿಸಿಕೊಂಡು ರಕ್ತ ಕೊಡುವುದಕ್ಕೆ ಅನುಕೂಲ ಇದ್ದೂ ಕೊಡದೆ ಇರುವವರ ಹೆಸರುಗಳನ್ನು ವಿಶೇಷವಾಗಿ ಸದನದಲ್ಲಿ ಓದುತ್ತೇನೆ. ಆದುದರಿಂದ ದಯಮಾಡಿ ಅದಕ್ಕೆಲ್ಲಾ ಅವಕಾಶ ಕೊಡಬೇಡಿ ಮಹಾದೇವ ಪ್ರಸಾದ್ ಅವರೇ ಈಗಲೇ ಹೋಗಿ ರಕ್ತ ಕೊಟ್ಟು ಬನ್ನಿ.

ಶ್ರೀ ಎಸ್.ಸುರೇಶ್ ಕುಮಾರ್: ಹಾಗೆ ಮಾಡುತ್ತೀರೆಂದರೆ ಮಧ್ಯಾಹ್ನ ಕೋರಂ ಇರುವುದಿಲ್ಲ.

ಅಧ್ಯಕ್ಷರು: ಮಾನ್ಯ ಆರೋಗ್ಯ ಸಚಿವರು ಮೊನ್ನೆ ರಾಜಭವನದಲ್ಲಿ ರಕ್ತ ಕೊಟ್ಟಿದ್ದಾರೆ. ಅವರೂ ಕೂಡ ಬೆಳಗ್ಗೆ ನಮ್ಮ ಜೊತೆಯಲ್ಲಿದ್ದರು. ಯಾರು ಯಾರು ಕೊಡಬಹುದು,

ಯಾರು ಯಾರು ಕೊಡುವುದಕ್ಕೆ ಶಕ್ತಿ ಇದೆ ಅವರೆಲ್ಲಾ ದಯಮಾಡಿ ಹೋಗಿ ಕೊಟ್ಟುಬನ್ನಿ. ಸಹೋದರಿ ಹೇಮಾವತಿಯವರು ಬೆಳಿಗ್ಗೆ ನಮ್ಮಜೊತೆಯಲ್ಲಿ ಬಂದು ರಕ್ತ ಕೊಟ್ಟಿದ್ದಾರೆ. 50 ವರ್ಷ ಮೇಲ್ಪಟ್ಟವರು ಡೈಯಾಬಿಟೀಸ್ ಇರತಕ್ಕವರು ಕೊಡತಕ್ಕ ಅಗತ್ಯ ಇಲ್ಲ. ಶ್ರೀರಾಮರೆಡ್ಡಿಯವರು ಮೂಗಿನ ಮೇಲೆ ಹಾಗೆ ಕೈಯಿಟ್ಟುಕೊಂಡು ಕುಳಿತುಕೊಳ್ಳುವ ಅಗತ್ಯ ಇಲ್ಲ, ಹೋಗಿ ರಕ್ತ ಕೊಟ್ಟು ಬಂದುಬಿಡಬೇಕು. ಬರೀ ತ್ಯಾಗ ಮಾಡುತ್ತೇವೆಂದು ಹೇಳಿದರೆ ಸಾಲದು, ರಕ್ತ ಕೊಟ್ಟು ಬರಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಈಗಾಗಲೇ ರಕ್ತ ಕೊಟ್ಟಿದ್ದೇನೆ. ಆದರೆ ಇಲ್ಲಿ ಕೊಟ್ಟಿಲ್ಲ. ಒಂದು ತಿಂಗಳ ಹಿಂದೆ ಬೇರೆ ಕಡೆ ಕೊಟ್ಟಿದ್ದೇನೆ.

ಅಧ್ಯಕ್ಷರು: ಇದನ್ನು ನಂಬುವುದಕ್ಕಾಗುವುದಿಲ್ಲ. ನಾನು ಎಲ್ಲಾ ವಿವರಗಳನ್ನು ಸದನದ ಮುಖಾಂತರ ಪತ್ರಿಕೆಗಳಿಗೆ ಪ್ರಾರ್ಥಿಸಿಕೊಂಡು ಸಾರ್ವಜನಿಕರಿಗೆ ತಿಳಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಖಂಡಿತ ಆ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು: ಆದುದರಿಂದ ಯಾರು ಯಾರು ರಕ್ತ ಕೊಟ್ಟಿಲ್ಲ ಅವರೆಲ್ಲರೂ ದಯಮಾಡಿ ಇನ್ನೊಂದು ಸಾರಿ ಅದಕ್ಕೆ ಅವಕಾಶ ಕೊಡದ ಹಾಗೆ ಹೋಗಿ ರಕ್ತದಾನ ಮಾಡಿ ಬರಬೇಕೆಂದು ವಿನಂತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಬಹಳ ಜನ ಮದ್ಯಪಾನ ಮಾಡತಕ್ಕವರು ಇದ್ದಾರೆ. ಅವರ ರಕ್ತ ಸರಿ ಇರುವುದಿಲ್ಲ. ಅದಕ್ಕೋಸ್ಕರ ಸ್ವಲ್ಪ ನೋಡಿ. ರಕ್ತ ಕೊಡುವಾಗ ಅದು ಪರಿಶುದ್ಧವಾಗಿರಬೇಕು, ಚೆನ್ನಾಗಿರಬೇಕು. ಕೆಲವರು ಮದ್ಯಾಪಾನ ಮಾಡಿದವರು ಕೊಡತಕ್ಕ ರಕ್ತ ಕೆಟ್ಟಿದ್ದು ಇರುತ್ತದೆ. ಅದರಿಂದ ಬೇರೆಯವರು ಹಾಳಾಗುವುದು ಬೇಡ.

ಅಧ್ಯಕ್ಷರು: ಹೋದವರೆಲ್ಲರ ರಕ್ತವನ್ನು ತೆಗದುಕೊಳ್ಳುವುದಿಲ್ಲ. ಅಲ್ಲಿ ಕೆಲವು ಷರತ್ತುಗಳು ಇವೆ. ಅಲ್ಲಿ ಅಧಿಕಾರಿಗಳು ಯಾರಿದ್ದಾರೆ ಅವರು ನೋಡಿ ಮಾಡುತ್ತಾರೆ. ಖಚಿತವಾಗಿ ಇಂಥವರ ರಕ್ತ ಬೇಡವೆಂದರೆ ದಯಮಾಡಿ ಹೇಳಿ, ಅವರ ರಕ್ತದ ವಿಚಾರದಲ್ಲಿ ತಿಳಿಸುವುದಕ್ಕೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಆ ವಿಚಾರ ತಮಗೆ ಗೊತ್ತಿದೆ. ಏತಕ್ಕೆ ಹೀಗೆ ಮಾಡುತ್ತೀರಿ?

(ಮಾನ್ಯ ಉಪಾಧ್ಯಕ್ಷರು(ಶ್ರೀ ಚಂದ್ರಶೇಖರ ಎಂ.ಮಾಮನಿ)ರವರು ಪೀಠವನ್ನಲಂಕರಿಸಿದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಕಾವೇರಿ ಡಿಸ್‌ಪ್ಯೂಟ್ ಬಗ್ಗೆ....